ಆ. 4702 ಹೊಸ ಕೆರೆಗಳ ನಿರ್ಮಾಣ ಯೋಜನೆ ಲೆಕ್ಕ ಶೀರ್ಷಿಕೆಯಡಿ ಎಷ್ಟು ಹಣ ಮಂಜೂರಾಗಿದೆ ಎಂಬುದನ್ನು ತಿಳಿಸುವುದು?

ಇ. ಸದರಿ ಕೆರೆಯ ಕಾಮಗಾರಿಗೆ ಇನ್ನು 3 ಲಕ್ಷ ರೂಪಾಯಿ ಮೊತ್ತದ ಬಿಲ್ಲುಗಳು ಜಿಲ್ಲಾ ಪಂಚಾಯತಿ ಕೋಲಾರದಲ್ಲಿ ಒಪ್ಪಿಗೆಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ. 3 ಲಕ್ಷ ರೂಪಾಯಿ ಮೊತ್ತದ ಬಿಲ್ಲುಗಳು ಜಿಲ್ಲಾ ಪಂಚಾಯ್ತಿಯಲ್ಲಿ ನೆನೆಗುದಿಗೆ ಬಿದ್ದಿರುವುದನ್ನು ಘನ ಸರ್ಕಾರ ಪಾವತಿಸಲು ಕ್ರಮ ತೆಗೆದುಕೊಳ್ಳಲಾಗುವುದೆ?

ಉತ್ತರ

ಅ. ಬಂದಿದೆ.

ಆ. 2001-2002ನೇ ಸಾಲಿನಲ್ಲಿ ಕೋಲಾರ ಜಿಲ್ಲೆಗೆ 4702 ಹೊಸ ಕೆರೆ ನಿರ್ಮಾಣಕ್ಕೆ ಅನುದಾನ ನಿಗದಿಪಡಿಸಿರುವುದಿಲ್ಲ.

ಇ. ಬಂದಿದೆ.

ಈ. 2002-2003ನೇ ಸಾಲಿನ ಕೋಲಾರ ಜಿಲ್ಲಾ ಪಂಚಾಯತ್ ಆಯವ್ಯಯದಲ್ಲಿ ಅನುದಾನ ಲಭ್ಯತೆಗೆ ಅನುಗುಣವಾಗಿ ಸದರಿ ಬಿಲ್ಲನ್ನು ಆದ್ಯತೆ ಮೇಲೆ ಪಾವತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಗ್ರಾಮೀಣ ರೋಜ್‌ಗಾರ್ ಯೋಜನಾ ಕಾರ್ಯಕ್ರಮಗಳ ಪಟ್ಟಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 209(705)

ಸದಸ್ಯರ ಹೆಸರು: ಶ್ರೀ ಚೌಡರೆಡ್ಡಿ (ಚಿಂತಾಮಣಿ)

ಉತ್ತರಿಸುವ ಸಚಿವರು: ಶ್ರೀ ಎಂ.ವೈ.ಘೋರ್ಪಡೆ(ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು)

ಪ್ರಶ್ನೆ

ಅ) ಬಾಗೇಪಲ್ಲಿ ತಾಲ್ಲೂಕು ಪಂಚಾಯ್ತಿಯವರು ದಿನಾಂಕ 1.12.2001ರಲ್ಲಿ ಬಾಗೇಪಲ್ಲಿ ತಾಲ್ಲೂಕು ಪಂಚಾಯ್ತಿ ಕಛೇರಿಯಲ್ಲಿ ಸಭೆ ಸೇರಿ ಸಂಪೂರ್ಣ ಗ್ರಾಮೀಣಾ

ರೋಜ್‌ಗಾರ್ ಯೋಜನಾ ಕಾರ್ಯಕ್ರಮಗಳ ಪಟ್ಟಿ ತಯಾರಿಸಿ ಕೋಲಾರ ಜಿಲ್ಲಾ ಪಂಚಾಯ್ತಿ ಕಛೇರಿಗೆ ಅನುಮೋದನೆಗೆ ಕಳುಹಿಸಿದ್ದನ್ನು ಜಿಲ್ಲಾ ಪಂಚಾಯ್ತಿಯವರು ತಿರಸ್ಕರಿಸಿ ವಾಪಸ್ಸು ಮಾಡಿರುವುದೇ ನಿಜವೇ?

ಆ) ತಾಲ್ಲೂಕು ಪಂಚಾಯ್ತಿಯವರು ದಿನಾಂಕ 1.12.2001ರ ಸಭೆಯಲ್ಲಿ ಯೋಜನೆಯ ಕಾರ್ಯಕ್ರಮಗಳನ್ನು ಸರ್ವಾನುಮತದಿಂದ ಅಂಗೀಕರಿಸಿದ ಮೇಲೆ ಅದನ್ನು ತಿರಸ್ಕರಿಸಲು ಯಾವ ಕಾಯಿದೆ ಮತ್ತು ಕಾನೂನು ಅಡಿಯಲ್ಲಿ ಜಿಲ್ಲಾ ಪಂಚಾಯ್ತಿಗೆ ಅಧಿಕಾರವಿದೆ?

ಉತ್ತರ

ಅ) ಮಾರ್ಗಸೂಚಿಯ ರೀತ್ಯಾ ಕ್ರಿಯಾ ಯೋಜನೆ ತಯಾರಿಸಿಲ್ಲದ ಕಾರಣ ವಾಪಸ್ಸು ಕಳುಹಿಸಲಾಗಿದೆ.

ಆ) ಸಂಪೂರ್ಣ ಗ್ರಾಮೀಣ ರೋಜ್‌ಗಾರ್ ಯೋಜನೆಯ ಮಾರ್ಗಸೂಚಿಯಂತೆ ಕ್ರಿಯಾ ಯೋಜನೆ ತಯಾರಿಸಿರುವುದಿಲ್ಲ ಮತ್ತು ಉದ್ಯೋಗ ಭರವಸೆ ಯೋಜನೆಯ ಮುಂದುವರೆದ ಕಾಮಗಾರಿಗಳನ್ನು ಕ್ರಿಯಾಯೋಜನೆಯಲ್ಲಿ ಸೇರಿಸಿರುವುದಿಲ್ಲ ಸರ್ಕಾರದ ಮಾರ್ಗಸೂಚಿಯನ್ನು ಪಾಲನೆ ಮಾಡಿಲ್ಲದ ಕಾರಣ ಹಿಂದಿರುಗಿಸಲಾಗಿದೆ.

ಚಿಂತಾಮಣಿ ಕ್ಷೇತ್ರಕ್ಕೆ ಸೇರಿದ ಚಿಲಕಲನೇರ್ಪು ಹೋಬಳಿಯ ಅಪ್ಪಸಾನಹಳ್ಳಿ ಗ್ರಾಮದ ಮೋರಿ ನಿರ್ಮಾಣ ಕಾರ್ಯ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 210(707)

ಸದಸ್ಯರ ಹೆಸರು: ಶ್ರೀ ಚೌಡರೆಡ್ಡಿ(ಚಿಂತಾಮಣಿ)

ಉತ್ತರಿಸುವ ಸಚಿವರು: ಶ್ರೀ ಎಂ.ವೈ.ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು)

ಪ್ರಶ್ನೆ

1. ಚಿಂತಾಮಣಿ ಕ್ಷೇತ್ರಕ್ಕೆ ಸೇರಿದ ಚಿಲಕಲನೇರ್ಪು ಹೋಬಳಿ ಅಪ್ಪಸಾನಹಳ್ಳಿ ಗ್ರಾಮದ ರಸ್ತೆ ಮತ್ತು ಪೀಗಲಗಟ್ಟ ಗ್ರಾಮದ ಬಳಿ ಒಂದು ಕಿರು ಮೋರಿ ಕಾಮಗಾರಿಯು ಯಾವ ಯೋಜನೆಯಲ್ಲಿ ಕೋಲಾರ ಜಿಲ್ಲಾ ಪಂಚಾಯತ್‌ರವರು ಮಾಡಿಸಿರುತ್ತಾರೆ.